S.C. 37/2024.

# ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಸಂಚಾರಿ ನ್ಯಾಯಾಲಯ ಹುನಗುಂದ, ಇವರ ನ್ಯಾಯಾಲಯದಲ್ಲಿ.

## ಸತ್ರ ಮೊಕದ್ದಮೆ ಸಂಖ್ಯೆ: 37/2024.

| | | | |
|---|---|---|---|
| ಹೆಸರು | : | ಈಶ್ವರ ದಡ್ಡಿ | ಫ್ರಾಸಾ-02 |
| ತಂದೆಯ ಹೆಸರು | : | ಸಂಗಪ್ಪ | ಚಾಸಾ-03 |
| ವಯಸ್ಸು | : | 60 ವರ್ಷ | |
| ಉದ್ಯೋಗ | : | ಶಿರಸ್ತೆದಾರ, ತಹಶೀಲ್ದಾರ ಕಚೇರಿ | |
| ವಾಸಸ್ಥಳ | : | ಬೀಳಗಿ | |

ದಿನಾಂಕಃ 27-02-2026 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ.**

ನಾನು ದಿನಾಂಕಃ 29-12-2014 ರಿಂದ ಆಗಸ್ಟ-2022 ರವರೆಗೆ ಅಮಿನಗಡನಲ್ಲಿ ಕಂದಾಯ ನೀರಿಕ್ಷಕ ಅಂತಾ ಕೆಲಸ ಮಾಡಿದ್ದೇನೆ.

ದಿನಾಂಕಃ 13-04-2017 ರಂದು ಮಧ್ಯಾಹ್ನ 12.00 ಗಂಟೆ ನಂತರ ಚಾಸಾ-1 ನನ್ನನ್ನು ಗ್ರಾನೈಟ್ ಕಲ್ಲು ದಿಮ್ಮೆಗಳು ಇರುವ ಕುರಿತು ಮಾಹಿತಿ ಬಂದಿದೆ ಎಂದು ಹೇಳಿ ಕೆರದುಕೊಂಡು ಜಮೀನು ಸರ್ವೇ ನಂ. 9/1+2/1, ಕ್ಷೇತ್ರ-06 ಎಕರೆ ಜಮೀನಿಗೆ ಮಧ್ಯಾಹ್ನ 2.00 ಗಂಟೆಗೆ ಹೋದೆವು. ನನ್ನ ಜೊತೆ ಚಾಸಾ-1,2 ಹಾಗೂ ನಾವಿ ಎಂಬ ಬೀಟ್ ಪೊಲೀಸ ಇದ್ದರು. ಜಮೀನಿಗೆ ಹೋದಾಗ ಜಮೀನಿನಲ್ಲಿ ಯಾರೂ ಇರಲಿಲ್ಲ. ಪಕ್ಕದ ಜಮೀನವರನ್ನು ವಿಚಾರಿಸಿದಾಗ ನಾವು ಬರುವುದನ್ನು ನೋಡಿ ಓಡಿ ಹೋದ ಎಂದು ಹೇಳಿದರು. ಅಲ್ಲಿ ಲೈಟ್-ರೆಡ್ ಕಲ್ಲಿನ 30 ದಿಮ್ಮೆಗಳು ಇದ್ದವು. ನಿಪಿ-2,3 ಪೋಟೋಗಳನ್ನು ನೋಡಿ ಗುರುತಿಸಿದ್ದೇನೆ. ಅವುಗಳ ತೂಕ 213 ಮೆಟ್ರಿಕ್ ಟನ್ ಇತ್ತು. ಅವುಗಳ ಮೌಲ್ಯ ರೂ.2,56,000/- ಇತ್ತು. ಅವುಗಳನ್ನು ಪಂಚನಾಮೆ ಮೂಲಕ ಜಪ್ತ ಮಾಡಿದ್ದಾರೆ. ಪಂಚನಾಮೆಯನ್ನು ಈಗಾಗಲೇ ನಿಪಿ-1 ಅಂತಾ ಗುರುತಿಸಲಾಗಿದ್ದು, ಸಹಿಯನ್ನು ನಿಪಿ-1(ಬಿ) ಅಂತಾ ಗುರುತಿಸಲಾಯಿತು. ಪಂಚನಾಮೆಯನ್ನು ಮಧ್ಯಾಹ್ನ 2.00 ರಿಂದ ಸಂಜೆ 6.00 ಗಂಟೆವರೆಗೆ ಬರೆಯಲಾಯಿತು. ಆ ಬಗ್ಗೆ ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ.

2018 ರಲ್ಲಿ ಪೊಲೀಸರು ಠಾಣೆಗೆ ಕರೆಯಿಸಿದ್ದರು. ದಿನಾಂಕ ಗೊತ್ತಿಲ್ಲ. ಅಲ್ಲಿ 1 ನೇ ಆರೋಪಿ ಬಂದಿದ್ದ. ಅವರು ಲೈಸೆನ್ಸ ಬಗ್ಗೆ ವಿಚಾರಣೆ ಮಾಡಿದಾಗ ಇಲ್ಲ ಎಂದು ಹೇಳಿದರು. ಸ್ಥಳದಲ್ಲಿ ಟ್ರ್ಯಾಕ್ಟರ್ ಇದ್ದ ಬಗ್ಗೆ ನಾನು ನೋಡಿಲ್ಲ.

**<u>ಪಾಟಿಸವಾಲುಃ ಆರೋಪಿತರ ಪರ ಶ್ರೀ. ಸಿ.ಬಿ.ಎಸ್ ವಕೀಲರಿಂದ.</u>**

ಆ ದಿನ ಯಾವ ವಾರ ಇತ್ತು ಅಂತಾ ನೆನಪಿಲ್ಲ. ಆ ದಿನ ಕಚೇರಿಗೆ ರಜಾ ಇತ್ತು ಎಂಬ ಬಗ್ಗೆ ನೆನಪಿಲ್ಲ. ಸದರಿ ನಿಪಿ-2,3 ಪೋಟೋಗಳನ್ನು ಸ್ಥಳದಲ್ಲಿ ತೆಗೆದಿಲ್ಲ, ಅವುಗಳನ್ನು ಠಾಣೆಯಲ್ಲಿ ತೆಗೆದಿದ್ದಾರೆ. ಸ್ಥಳದಲ್ಲಿ ನಾವು ನೋಡಿದ ಗ್ರಾನೈಟ್ ದಿಮ್ಮೆಗಳ ಬಣ್ಣ ನನಗೆ ಗೊತ್ತಿಲ್ಲ. ಚಾಸಾ-1 ಖೊಟ್ಟಿ ಪ್ರಕರಣ ದಾಖಲಿಸಿದ್ದು ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ. 2018 ರಲ್ಲಿ ನನ್ನನ್ನು ಠಾಣೆಗೆ ಕರೆಯಿಸಿ ಹೇಳಿಕೆಗಳನ್ನು ಪಡೆದಿಲ್ಲ ಎನ್ನುವುದು ಸರಿಯಲ್ಲ. ಪಂಚನಾಮೆಯನ್ನು ಠಾಣೆಯಲ್ಲಿ ತಯಾರಿಸಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ. ಸರಿ ಅದೆ.

27-02-2026
ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಸಂಚಾರಿ ನ್ಯಾಯಾಲಯ, ಹುನಗುಂದ.

S.C. 37/2024.

**ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಸಂಚಾರಿ ನ್ಯಾಯಾಲಯ ಹುನಗುಂದ, ಇವರ ನ್ಯಾಯಾಲಯದಲ್ಲಿ.**

**ಸತ್ರ ಮೊಕದ್ದಮೆ ಸಂಖ್ಯೆ: 37/2024.**

| | | | |
|---|---|---|---|
| ಹೆಸರು | : | ಚನ್ನನಗೌಡ ಕೊಣ್ಣುರ | ಫ್ರಾಸಾ-01 |
| ತಂದೆಯ ಹೆಸರು | : | ಶಾಂತಗೌಡ | ಚಾಸಾ-02 |
| ವಯಸ್ಸು | : | 43 ವರ್ಷ | |
| ಉದ್ಯೋಗ | : | ಗ್ರಾಮಆಡಳಿತಾಧಿಕಾರಿ | |
| ವಾಸಸ್ಥಳ | : | ಸಸಾಲಟ್ಟಿ | |

ದಿನಾಂಕಃ 27-02-2026 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ.**

ನಾನು ದಿನಾಂಕಃ 01-07-2012 ರಿಂದ ಡಿಸೆಂಬರ್-2020 ರವರೆಗೆ ಗೂಡುರನಲ್ಲಿ ಗ್ರಾಮಲೆಕ್ಕಾಧಿಕಾರಿ ಅಂತಾ ಕೆಲಸ ಮಾಡಿದ್ದೇನೆ.

ದಿನಾಂಕಃ 13-04-2017 ರಂದು ನಾನು, ಚಾಸಾ-1, 3 ಹಾಗೂ ರಮೇಶ ನಾವಿ ಎಂಬ ಪೊಲೀಸ ಸೇರಿ ಗಾಣದಾಳ ಜಮೀನು ಸರ್ವೇ ನಂ. 9/1+2/1, ಕ್ಷೇತ್ರ-06 ಎಕರೆ ಜಮೀನಿಗೆ ಮಧ್ಯಾಹ್ನ 12.00 ಗಂಟೆಗೆ ಹೋಗಿದ್ದು ಅದು 1 ನೇ ಆರೋಪಿಯ ಹೆಸರಿನಲ್ಲಿತ್ತು. 1 ನೇ ಆರೋಪಿ ಮೃತನಾಗಿದ್ದಾನೆ. ಅಲ್ಲಿ 30 ಗ್ರಾನೈಟ್ ಕಲ್ಲಿನ ದಿಮ್ಮು(ಬ್ಲಾಕ್) ಗಳು ಇದ್ದವು. ಅವುಗಳ ಬಣ್ಣ ಪಿಂಕ್ ಇತ್ತು. ನಾವು ಹೋದ ತಕ್ಷಣ 1 ನೇ ಆರೋಪಿ ಮನೆಗೆ ಹೋದ. ಸ್ಥಳದಲ್ಲಿ ಬೇರೆ ಯಾರೂ ಇರಲಿಲ್ಲ. ಸದರಿ ಕಲ್ಲುಗಳನ್ನು ಚಾಸಾ-1 ಲೆಕ್ಕ ಮಾಡಿ ರೂ.2,13,350 ಮೆಟ್ರಿಕ್ ಟನ್ ತೂಕ ಇವೆ ಎಂದು ಹೇಳಿದರು ಹಾಗೂ ಅದರ ಮೌಲ್ಯ ರೂ.2,56,020/- ಆಗುತ್ತದೆ ಎಂದು ಹೇಳಿದರು. ಅವುಗಳನ್ನು ಮಹಜರು ಮೂಲಕ ಜಪ್ತ ಮಾಡಿದ್ದೇವೆ. ಸದರಿ ಮಹಜರನ್ನು ನಿಪಿ-1 ಅಂತಾ, ಸಹಿಯನ್ನು ನಿಪಿ-1(ಎ) ಅಂತಾ ಗುರುತಿಸಲಾಯಿತು. ಪೊಲೀಸರು ಘಟನೆ ಬಗ್ಗೆ ನನ್ನ ಹೇಳಿಕೆ ಪಡೆದಿದ್ದಾರೆ.

ದಿನಾಂಕಃ 14-04-2017 ರಂದು ಪೊಲೀಸರು ನನ್ನನ್ನು ಠಾಣೆಗೆ ಕರೆಯಿಸಿ ಘಟನೆ ಬಗ್ಗೆ ಪುನಃ ಹೇಳಿಕೆ ಪಡೆದಿದ್ದಾರೆ. ಪೊಲೀಸರು ಸ್ಥಳದಲ್ಲಿ 2 ಪೋಟೋ ತೆಗೆದಿದ್ದು ಅವುಗಳನ್ನು ನಿಪಿ-2,3 ಅಂತಾ ಗುರುತಿಸಲಾಯಿತು.

ದಿನಾಂಕಃ 05-08-2017 ರಂದು ಪೊಲೀಸರು ನನ್ನನ್ನು ಪುನಃ ಠಾಣೆಗೆ ಕರೆಯಿಸಿ 1 ನೇ ಆರೋಪಿ ಜಾಮೀನು ಪಡೆದು ಠಾಣೆಗೆ ಹಾಜರಾಗಿದ್ದು ನನಗೆ ಅವನನ್ನು ತೋರಿಸಿ ಗುರುತಿಸಲು ಹೇಳಿದರು. ಗುರುತಿಸಿದ ಬಗ್ಗೆ ಹೇಳಿಕೆ ಪಡೆದಿದ್ದಾರೆ. ಸ್ಥಳದಲ್ಲಿ 2 ಟ್ರ್ಯಾಕ್ಟರ ಇದ್ದವು. ಸದರಿ ಟ್ರ್ಯಾಕ್ಟರ ಯಾರಿಗೆ ಸೇರಿದ್ದವು ನನಗೆ ಗೊತ್ತಿಲ್ಲ. ಟ್ರ್ಯಾಕ್ಟರಗಳ ಪೋಟೋ ನೋಡಿ ಗುರುತಿಸಿದ್ದೇನೆ. ಅವುಗಳನ್ನು ನಿಪಿ-4 ರಿಂದ 8 ಅಂತಾ ಗುರುತಿಸಲಾಯಿತು. ಠಾಣೆಯಲ್ಲಿ ತನಿಖಾಧಿಕಾರಿ 1 ನೇ ಆರೋಪಿಗೆ ಲೈಸೆನ್ಸ ಕೇಳಿದ್ದು ಅವರು ಇಲ್ಲ ಎಂದು ಹೇಳಿರುತ್ತಾರೆ. ಟ್ರ್ಯಾಕ್ಟರಗಳನ್ನು ಯಾವ ವಿಚಾರಕ್ಕೆ ಜಪ್ತ ಮಾಡಿದ್ದಾರೆ ನನಗೆ ಗೊತ್ತಿಲ್ಲ.

**<u>ಪಾಟೀಸವಾಲುಃ ಆರೋಪಿತರ ಪರ ಶ್ರೀ. ಸಿ.ಬಿ.ಎಸ್ ವಕೀಲರಿಂದ.</u>**

ಆ ದಿನ ಯಾವ ವಾರ ಇತ್ತು ಅಂತಾ ಗೊತ್ತಿಲ್ಲ ಆದರೆ ರಜೆ ಇರಲಿಲ್ಲ. ನಿಪಿ-1,2 ಸರ್ವೇ ನಂಬರ ಜಮೀನಿನಲ್ಲಿ ತೆಗೆದಿದ್ದಾರೆ. ಸಾಕ್ಷಿ ಪೋಟೋ ನೋಡಿ ಅವುಗಳನ್ನು ಠಾಣೆಯಲ್ಲಿ ತೆಗೆದಿದ್ದಾರೆ ಎಂದು ಹೇಳುತ್ತಾರೆ. ಸರ್ವೇ ನಂ. 9/1+2/1, ಕ್ಷೇತ್ರ-06 ಎಕರೆ ಜಮೀನಿಗೆ ಮಧ್ಯಾಹ್ನ 12.00 ಗಂಟೆಗೆ ಹೋಗಿ ಪಿಂಕ್ ಗ್ರ್ಯಾನೈಟ್ ದಿಮ್ಮೆಗಳನ್ನು ಜಪ್ತ ಮಾಡಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಆ ಜಮೀನಿನಿಲ್ಲಿ ಪಿಂಕ್ ಗ್ರ್ಯಾನೈಟ್ ಸಿಗುವುದಿಲ್ಲ ಎನ್ನುವುದು ಸರಿಯಲ್ಲ. ನಿಪಿ-1 ಪಂಚನಾಮೆಯನ್ನು ನಾನೇ ಬರೆದಿದ್ದೇನೆ. ನಾನು ಮತ್ತು ಚಾಸಾ-1 ಸೇರಿ ನಿಪಿ-1 ನ್ನು ಠಾಣೆಯಲ್ಲಿ ಬರೆದಿದ್ದೇವೆ ಎನ್ನುವುದು ಸರಿಯಲ್ಲ. ಚಾಸಾ-1 ಖೊಟ್ಟಿ ಪ್ರಕರಣ ದಾಖಲಿಸಿದ್ದು ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

ದಿನಾಂಕಃ 14-04-2017 ಹಾಗೂ 05-08-2017 ರಂದು ನನ್ನನ್ನು ಠಾಣೆಗೆ ಕರೆಯಿಸಿ ಹೇಳಿಕೆಗಳನ್ನು ಪಡೆದಿಲ್ಲ ಎನ್ನುವುದು ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

27-02-2026

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಸಂಚಾರಿ ನ್ಯಾಯಾಲಯ, ಹುನಗುಂದ.